ಓ ಎಸ್ ಃ 138/2020
ಪಿ ಡಬ್ಲ್ಯೂ 1

ಮಧ್ಯಂತರ ಅರ್ಜಿ ನಂ 10 ಹಾಗೂ 11 ರ ಮೇಲೆ ಹೊರಡಿಸಿದ ಆದೇಶದ ಮೇರೆಗೆ ದಿನಾಂಕಃ 02.02.2024 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ 2 ಹಾಗೂ 4 ಪರ ಶ್ರೀ ಎಂ ಎಸ್ ಆರ್. ವಕೀಲರಿಂದ**

ನನ್ನ ತಂದೆಯ ಹೆಸರು ದುಶ್ಯಂತರಾಜ್. ನನ್ನ ತಂದೆಗೆ ಇಬ್ಬರು ಹೆಂಡತಿಯರು. ಅವರ ಹೆಸರು ಪ್ರೇಮ ಲೀಲಾ ಹಾಗೂ ಮಂಜುಳ. ನಾನು ನನ್ನ ತಂದೆಯ ಮೊದಲ ಹೆಂಡತಿ ಪ್ರೇಮಲೀಲಾ ಅವರ ಮಗ ಎಂದರೆ ಸರಿ . ನನ್ನ ತಂದೆಯ 2 ನೇ ಹೆಂಡತಿ ಮಂಜುಳಾ ಅವರ ಮಗ ಅಜಯ್ ಎಂದರೆ ಸರಿ .

ದಾವಾ ಆಸ್ತಿ ನಂ 8 ನನ್ನ ತಂದೆಗೆ 1995 ರಲ್ಲಿನೊಂದಾಯಿತ ಪಾಲು ವಿಭಾಗದ ಮೂಲಕ ಬಂದಿತ್ತು ಎಂದರೆ ಸರಿ . ದಾವಾ ಆಸ್ತಿ ನಂ 8 ನ್ನು ನಾನು, ನನ್ನ ತಂದೆ ಮತ್ತು ನನ್ನ ತಮ್ಮ ಅಜಯ್ಯ ನಮ್ಮ ಕುಟುಂಬದ ಅವಶ್ಯಕತೆಗಾಗಿ 1999 ರಲ್ಲಿ ಬೀಮಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ . ನನ್ನ ತಮ್ಮ ಅಜಯ ನನ್ನ ಹಾಗೂ ನನ್ನ ತಂದೆಯ ವಿರುದ್ಧ ದಾವಾ ಆಸ್ತಿ ನಂ 8 ರ ಕುರಿತು ಓ ಎಸ್ ನಂ.25/2012 ನ್ನು ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಆ ದಾವೆಯಲ್ಲಿ ನಾನು 4 ನೇ ಪ್ರತಿವಾದಿ ಅಗಿದ್ದು , ನನ್ನ ಪರವಾಗಿ ಹಾದಿಮನಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೆ ಎಂದರೆ ನನಗೆ ಗೊತ್ತಿಲ್ಲ. ಅ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಶಿರಮಗೊಂಡನಹಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ದಾವಾ ಆಸ್ತಿ ನಂ 8 ನ್ನು ನಮ್ಮಿಂದ ಕ್ರಯಕ್ಕೆ ಪಡೆದ ಬೀಮಪ್ಪ ಅವರು ಕೂಡ ಶಿರಮಗೊಂಡನಹಳ್ಳಿ ಗ್ರಾಮದವರು ಆಗಿರುತ್ತಾರೆ. ಬೀಮಪ್ಪನ ಮನೆಯ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿಯಲ್ಲ. ಸದರಿ ಬೀಮಪ್ಪ ದಾವಾ ಆಸ್ತಿ ನಂ 8 ನ್ನು 2009 ರಲ್ಲಿ 2 ನೇ ಪ್ರತಿವಾದಿ ಗಿರಿಜಮ್ಮ ಅವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾನಂಗಿ ಮುರಿಗೆಪ್ಪನ 1 ನೇ ಹೆಂಡತಿ ಪಾರ್ವತಮ್ಮ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಮಾನಂಗಿ ಮುರಿಗೆಪ್ಪನ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಮಾನಂಗಿ ಮುರಿಗೆಪ್ಪನ 1 ನೇ ಹೆಂಡತಿ ಪಾರ್ವತಮ್ಮ ತೀರಿಕೊಂಡ ನಂತರ ಆತ 2 ನೇ ಹೆಂಡತಿ ಗಿರಿಜಮ್ಮನನ್ನು ಮದುವೆಯಾದರು ಎಂದರೆ ಸರಿ. ಗಿರಿಜಮ್ಮ ಮತ್ತು ಆಕೆಯ ತಮ್ಮ ತಿಪ್ಪೆಸ್ವಾಮಿಯ ಮದುವೆ ಒಂದೇ ಮುಹೂರ್ತದಲ್ಲಿ ದಿನಾಂಕ 6.6.1983 ರಲ್ಲಿ ಆಗಿದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ.

2 ನೇ ಪ್ರತಿವಾದಿ ಗಿರಿಜಮ್ಮನ ತಂದೆಯ ಹೆಸರು ಮಹಾದೇವಪ್ಪ ಎಂದರೆ ಸರಿ . ಗಿರಿಜಮ್ಮ ಹಾಗೂ ಆಕೆಯ ಅಣ್ಣ ತಮ್ಮಂದಿರ ನಡುವೆ ಅವರ ಕುಟುಂಬದಲ್ಲಿ 15.2.1982 ರಲ್ಲಿ ಪಾಲು ವಿಭಾಗ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಪಾಲು ವಿಭಾಗದಲ್ಲಿ ಗಿರಿಜಮ್ಮನ ಪಾಲಿಗೆ ಕಂದಗಲ್ ಗ್ರಾಮದ ಸರ್ವೆ ನಂ 96

ರಲ್ಲಿ 4 ಎಕರೆ 20 ಗುಂಟೆ ಬಂದಿತ್ತು ಎಂದು ಸೂಚಿಸಿದರೆ ಸಾಕ್ಷಿ 1 ಎಕರೆ 30 ಗುಂಟೆ ಜಮೀನು ಬಂದಿತ್ತು ಎಂದು ನುಡಿದಿರುತ್ತಾರೆ. ಸದರಿ ಪಾಲು ವಿಭಾಗದಲ್ಲಿ ಗಿರಿಜಮ್ಮನ ಭಾಗಕ್ಕೆ 4 ಎಕರೆ 20 ಗುಂಟೆ ಜಮೀನು ಬಂದಿತ್ತು ಆ ಪೈಕಿ ದಿನಾಂಕ 1.6.1983 ರಂದು ಗಿರಿಜಮ್ಮ ಆಕೆಯ ಸಹೋದರರಿಗೆ 3 ಕ್ರಯ ಪತ್ರಗಳ ಮೂಲಕ ಒಟ್ಟು 2 ಎಕರೆ 30 ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ನಂ 7 ನಮ್ಮ ಕುಟುಂಬಕ್ಕೆ ಹೇಗೆ ಬಂದಿತು ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ದಾವಾ ಆಸ್ತಿ ನಂ 7 ಗಿರಿಜಮ್ಮನ ಭಾಗಕ್ಕೆ ಬಂದಿರುವುದರಿಂದ ಆ ಆಸ್ತಿ ನಮ್ಮ ಕುಟುಂಬಕ್ಕೆ ಯಾವ ರೀತಿ ಬಂದಿತು ಎಂದು ನನಗೆ ಹೇಳಲು ಆಗುತ್ತಿಲ್ಲ ಎಂದರೆ ಸರಿ . 2 ನೇ ಪ್ರತಿವಾದಿಯ ತವರು ಮನೆ ಮತ್ತು ಗಂಡನ ಮನೆ ಕಂದಗಲ್ ಎಂದರೆ ಸರಿ . ದಾವಾ ಆಸ್ತಿ ನಂ 7 , 2 ನೇ ಪ್ರತಿವಾದಿ ಗಿರಿಜಮ್ಮನ ಹೆಸರಿಗೆ ಆಕೆಯ ಮದುವೆಗಿಂತ ಪೂರ್ವದಲ್ಲಿ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ 3 ನೇ ಪುಟದ 2 ನೇ ಪ್ಯಾರದಲ್ಲಿ" ನಾನು ಮುಂದುವರೆದು ಹೇಳುವುದು ಏನೆಂದರೆ , ದಾವಾ ಐಟಂ ನ 2 ನ್ನು ಪಾಲು ವಿಭಾಗ ಎಂದು ಪ್ರತಿವಾದಿ ನಂ 2 ರವರಿಗೆ ಪ್ರತಿವಾದಿ ನಂ 2 ರವರ ತಂದೆಯವರು ನೀಡಿರುತ್ತಾರೆ. ಆದರೆ ಪ್ರತಿವಾದಿ ನಂ 2 ರವರ ತಂದೆಯವರು ಮಾಡಿದ ಸಾಲವನ್ನು ಪ್ರತಿವಾದಿ ನಂ 1 ರವರು ತೀರುವಳಿ ಮಾಡಿರುತ್ತಾರೆ. ಸಾಲ ತೀರುವಳಿ ಮಾಡಿದಕ್ಕೋಸ್ಕರ ಸದರಿ ಜಮೀನನ್ನು ನೀಡಿರುತ್ತಾರೆ. ಅದನ್ನು ಕ್ರಯದ ಬದಲು ಪಾಲು ವಿಭಾಗ ಎಂದು ಪ್ರತಿವಾದಿ ನಂ 2 ರವರ ಹೆಸರಿಗೆ ನೀಡಿರುತ್ತಾರೆ. ಸದರಿ ಆಸ್ತಿಯಲ್ಲಿ ಸಹ ನಮಗೆ ಹಿಸ್ಸೆ ಇರುತ್ತದೆ'ಎಂದು ಆ ರೀತಿ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ." ಗಿರಿಜಮ್ಮನ ತಂದೆ ಸಾಲ ಮಾಡಿದ್ದರು ಆ ಸಾಲವನ್ನು ನನ್ನ ಅಜ್ಜ ತೀರಿಸಿದ್ದರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ. ದಾವಾ ಆಸ್ತಿ ನಂ 7 , 2 ನೇ ಪ್ರತಿವಾದಿಗೆ ಆಕೆಯ ಮದುವೆಗಿಂತ ಪೂರ್ವದಲ್ಲಿ ಅಕೆಯ ತಂದೆಯ ಕುಟುಂಬದ ಪಾಲು ವಿಭಾಗದಲ್ಲಿ ಆಕೆಗೆ ಬಂದಿರುವುದರಿಂದ 2 ನೇ ಪ್ರತಿವಾದಿಯೇ ದಾವಾ 7 ನೇ ಆಸ್ತಿಯ ಸಂಪೂರ್ಣ ಮಾಲಿಕಳು ಎಂದು ಸೂಚಿಸಿದಾಗ ಸಾಕ್ಷಿ ಇರಬಹುದು ಎಂದು ನುಡಿದಿರುತ್ತಾರೆ. ಸದರಿ ಪಾಲು ವಿಭಾಗ ಆದಾಗಿನಿಂದ ದಾವಾ ಆಸ್ತಿ ನಂ 7 ರ ಪಹಣಿ 2 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸರಿ . ದಾವಾ ಆಸ್ತಿ ನಂ 7 ರಲ್ಲಿ ತೆಂಗಿನ ತೋಟ ಇದೆ ಎಂದರೆ ಸರಿ . ದಾವಾ ಆಸ್ತಿ ನಂ 7 ರಲ್ಲಿ ತೆಂಗಿನ ತೋಟದಿಂದ 2 ನೇ ಪ್ರತಿವಾದಿಗೆ ಆದಾಯ ಇದೆ ಎಂದರೆ ಸಾಕ್ಷಿ ಈಗ 4-5 ವರ್ಷಗಳಿಂದ ಆದಾಯ ಇದೆ ಎಂದು ನುಡಿದಿರುತ್ತಾರೆ.

1983 ರಲಿ2 ನೇ ಪ್ರತಿವಾದಿ 2 ಎಕರೆ 30 ಗುಂಟೆ ಜಮೀನು ಮಾರಾಟ ಮಾಡಿ ಬಂದ ಹಣವನ್ನು ತಮ್ಮ ಹತ್ತಿರ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಮಾರಾಟ ಮಾಡಿದ ಹಣ ಹಾಗೂ ತೆಂಗಿನ ತೋಟದಿಂದ ಬಂದ ಆದಾಯ ಹಾಗೂ ಆವರ ಸಹೋದರರಿಂದ ಪಡೆದ ಹಣದಿಂದ 29.09.2009 ರಂದು 2 ನೇ ಪ್ರತಿವಾದಿ ಶಿರಮಗೊಂಡನಹಳ್ಳಿ ಗ್ರಾಮದಲ್ಲಿ ಇರುವ ದಾವಾ ಆಸ್ತಿ ನಂ 8 ನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. 2007 ರಿಂದ 2 ನೇ ಪ್ರತಿವಾದಿ ಆಕೆಯ ಗಂಡ ಮಾನಂಗಿ ಮುರಿಗೆಪ್ಪನಿಂದ ದೂರ ಇದ್ದಾರೆ ಎಂದರೆ ಸರಿಯಲ್ಲ. 2007 ರಿಂದ ಅವರ ನಡುವೆ ಜಗಳ ನಡೆಯುತ್ತಿತ್ತು ಎಂದರೆ ಸರಿಯಲ್ಲ. ದಿನಾಂಕ 29.9.2009 ರಂದು ದಾವಾ ಆಸ್ತಿ ನಂ 8 ನ್ನು 2 ನೇ ಪ್ರತಿವಾದಿಯ ಹೆಸರಿಗೆ

ಖರೀದಿಸುವಾಗ ಒಟ್ಟು ಕುಟುಂಬದ ಆದಾಯವನ್ನು ತೊಡಗಿಸಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ. ದಾವಾ ಆಸ್ತಿ ನಂ 8 ನ್ನು ದಿ 29.9.2009 ರಿಂದ ಖರೀದಿ ಮಾಡಿದಾಗಿನಿಂದ ಜಮೀನಿನ ಖಾತೆ 2 ನೇ ಪ್ರತಿವಾದಿಯ ಹೆಸರಿಗೆ ಇದೆ ಎಂದರ ಸರಿ. ಸದರಿ ಜಮೀನಿಗ ಸಂಬಂಧಪಟ್ಟಂತೆ ನಮ್ಮ ಹೆಸರಿಗೆ ಖಾತೆ ಮಾಡಿ ಎಂದು ದಾವೆ ದಾಖಲು ಮಾಡಿದ್ದೇವೆ. ದಾವಾ ಆಸ್ತಿ ನಂ 7 ಹಾಗೂ 8, 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ ಈವರೆಗೂ ನಾನು ಎಲ್ಲಿಯೂ ಅವರ ಹಕ್ಕನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ 8 ಈಗ ಕೋಟಿಗಟ್ಟಲೆ ಬೆಲೆ ಬಾಳುತ್ತದೆ ಎಂದರೆ ಸರಿ. ದಾವಾಆಸಿ ನಂ 1 ರಿಂದ 7 ರ ಬೆಲೆ ದಾವಾ ಆಸ್ತಿ ನಂ 8 ರ ಬೆಲೆಗೆ ಸಮನಾಗುತ್ತದೆ ಎಂದರೆ ಸರಿ. ವಾದಿಗಳು ಪಾರ್ವತಮ್ಮನ ವಾರಸುದಾರರು ಎಂದರೆ ಸರಿ . 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯನ್ನು ಪಡೆಯಲು 2 ನೇ ಪ್ರತಿವಾದಿಗೆ ಒಂದಲ್ಲ ಒಂದು ರೀತಿಯಲ್ಲಿ ಕಿರುಕುಳ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ 7 ಹಾಗೂ 8 ರ ಮೇಲೆ 2 ನೇ ಪ್ರತಿವಾದಿಯನ್ನು ಹೊರತು ಪಡಿಸಿ ಬೇರೆ ಯಾರಿಗೂ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ 1 ರಿಂದ 6 ರಲ್ಲಿ 2 ನೇ ಪ್ರತಿವಾದಿ ಗಿರಿಜಮ್ಮ ಹಾಗೂ ಆಕೆಯ ಮಕ್ಕಳಿಗೆ ಹಕ್ಕು ಇದೆ ಎಂದರೆ ಸರಿ . ದಾವಾ ಆಸ್ತಿ ನಂ 5 ರ ಪಕ್ಕದಲಿ 2 ವರೆ ಗುಂಟೆ ಕಣ ಇದೆ ಎಂದರೆ ಸಾಕ್ಷಿ ಅಜ್ಜನ ಹೆಸರಿನಲ್ಲಿ ಅಂದರೆ ಮಾನಂಗಿ ಮುರಿಗೆಪ್ಪನ ಹೆಸರಿನಲ್ಲಿ ಇದೆ ಎಂದು ನುಡಿದಿರುತ್ತಾರೆ . ಸದರಿ ಕಣವನ್ನು ನಾವು ಅನುಭವಿಸುತ್ತಿದ್ದೇವೆ ಎಂದರೆ ಸರಿ . ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲು ಯಾವುದೇ ತೊಂದರೆ ಇಲ್ಲ ಎಂದು ಸೂಚಿಸಿದಾಗ ಸಾಕ್ಷಿ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ನಂ 3 ಹಾಗೂ 8 ನ್ನು ಹೊಡೆಯಲು ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ದಾವಣಗೆರೆ.

ಓ ಎಸ್ ಃ 138/2020
ಪಿ ಡಬ್ಲ್ಯೂ 1